# ಕಾಂಡ ಕಾಣದಂತೆ ತುಂಬಿದ ಅಂಜೂರ



ಇತ್ತೀಚೆಗೆ ಕೊಡಗಿನ ಕುಶಾಲನಗರ ಸಮೀಪದ ರೆಸಾರ್ಟ್‌ಗೆ ಹೋಗಿದ್ದಾಗ ಅಲ್ಲಿನ ಅಂಜೂರದ ಮರ ಗಮನಸೆಳೆಯಿತು. ಮರದ ಕಾಂಡವೇ ಕಾಣದಂತೆ ಅಂಜೂರ ಹಣ್ಣುಗಳು ಅಲ್ಲಿ ಕಾಣಿಸಿದವು. ಮರದ ಕೊಂಬೆ, ಕಾಂಡದಲ್ಲಿ ಮಾತ್ರವಲ್ಲ ಬೇರಿನಲ್ಲೂ ಹಣ್ಣುಗಳನ್ನು ನೋಡಿ ಮರವೇ ಅಲ್ಲಿ ಗೌಣವಾಗಿ ಕಂಡಿತು. ಪೌಷ್ಟಿಕಾಂಶ, ರುಚಿಕರವುಳ್ಳ ಈ ಹಣ್ಣಿನಲ್ಲಿ ಕ್ಯಾಲ್ಸಿಯಂ, ಫೈಬರ್ ಮತ್ತು ಪೊಟ್ಯಾಸಿಯಂ ಹೆಚ್ಚಾಗಿದ್ದು, ಒಣಗಿಸಿಟ್ಟು ಹಲವು ತಿಂಗಳ ನಂತರವೂ ತಿನ್ನಬಹುದು. ಫೈಕಸ್ ಸಸ್ಯ ಜಾತಿಗೆ ಸೇರಿರುವ ಇದನ್ನು ಉಷ್ಣವಲಯ ಹವಾಗುಣ ಇರುವ ಕಡೆ ಬೆಳೆಯಬಹುದು. ಈ ರೀತಿಯ ಅಂಜೂರ ಮರ ಒಂದಿದ್ದರೆ ಸಾಕು ಎನಿಸಿತು.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ



# 50 ವರ್ಷ ಹಿಂದಿನ ಮಣಿಗಳ ಕಲಾಕೃತಿ

ಚಿತ್ರದಲ್ಲಿ ಕಾಣುತ್ತಿರುವ ಮಣಿಗಳೆಲ್ಲವೂ ಸುಮಾರು ಐವತ್ತು ವರ್ಷಗಳ ಹಿಂದಿನವು. ಆಗೆಲ್ಲಾ, ಅಕ್ಕಪಕ್ಕದ ಮನೆಯ ಹೆಣ್ಣು ಮಕ್ಕಳೆಲ್ಲಾ ಶಾಲೆಯ ಬೇಸಿಗೆ ರಜೆಯಲ್ಲಿ ಸೇರಿ, ಹರಟುತ್ತಾ ಖುಷಿಯಾಗಿ ಇಂತಹ ಸೃಜನಾತ್ಮಕ ಕೆಲಸಗಳನ್ನು ಮಾಡುತ್ತಿದ್ದರು. ಇವು ನನ್ನ ಅಕ್ಕ ನಾಗಮಣಿ, ಮಣಿಗಳಿಂದ ತಯಾರಿಸಿರುವ ಕಲಾಕೃತಿಗಳು. ಅಕ್ಕನ ಹೆಸರು ನಾಗಮಣಿಯಾಗಿದ್ದರೂ ಎಲ್ಲರೂ ಅವಳನ್ನು 'ಮಣಿ' ಅಂತಲೇ ಕರೆಯುತ್ತಿದ್ದರು.



ಆಗ ನಮಗೆ ಸ್ವಂತ ಮನೆ ಇರಲಿಲ್ಲ. ಆದರೆ ನಮ್ಮ ತಾಯಿಯವರು ತಮ್ಮ ಕಲ್ಪನೆಯ ಮನೆ ಹೀಗೆಯೇ ಇರಬೇಕೆಂದು ನನ್ನ ಅಕ್ಕನಿಗೆ ತಿಳಿಸಿದ್ದರು. ಅದಕ್ಕಾಗಿ ಅವಳು ಮಣಿಗಳಿಂದ ಮನೆಯ ಕಲಾಕೃತಿ ರಚಿಸಿದ್ದಳು. ಚಿತ್ರದಲ್ಲಿ ಕಾಣುತ್ತಿರುವ 'ಮಹಡಿ ಮನೆ' ಅಂದಿನ ನಮ್ಮ ಕನಸಿನ ಮನೆ. ಜೋಕಾಲಿ, ಮನೆ ಕಾಯುತ್ತಿರುವ ನಾಯಿ, ಬಾವಿ, ಬೃಂದಾವನ, ಮಂಟಪ, ಹಳೇ ಕಾಲದ ರೇಡಿಯೊ, ಒಂದು **hexagonal tray** (ಷಡ್ಕೋನ), ಚಿಕ್ಕ ಚಿಕ್ಕ ಬುಟ್ಟಿಗಳು, ಸೋಫಾ ಸೆಟ್, ಕೇರಂ ಬೋರ್ಡ್, ಕುದುರೆ, ಮೊಲ, ಬಾತುಕೋಳಿ ಮುಂತಾದ ಮಣಿಗಳಿಂದ ಕೂಡಿದ ರಚನೆಗಳು ಈಗಲೂ ಅಕ್ಕನ ಮನೆಯಲ್ಲಿವೆ. ಅವರ ಬಿಡುವಿನ ಸೃಜನಶೀಲತೆಯ ಕೆಲಸಗಳಿಗೆ ಇವು ಇಂದಿಗೂ ಸಾಕ್ಷಿ.

—ಜಯಂತಿ ಶಾಸ್ತ್ರಿ, ಮೈಸೂರು

# ನೊರೆಕಾಯಿ; ನೈಸರ್ಗಿಕ ಸೋಪು!

ದೂರ ನೋಟಕ್ಕೆ ಬೆಟ್ಟದ ನೆಲ್ಲಿಕಾಯಿ ಅಥವಾ ದ್ರಾಕ್ಷಿಯನ್ನು ಹೋಲುವ, ಆದರೆ ಒತ್ತೊತ್ತಾಗಿ ಫಲಿಸುವ ಇದು, ಇತ್ತೀಚೆಗೆ ಅಪರೂಪವಾಗುತ್ತಿರುವ ಅಂಟುವಾಳದ ಕಾಯಿ. ಆಂಗ್ಲ ಭಾಷೆಯಲ್ಲಿ ಸೋಪ್ ನಟ್ ಎನ್ನುವ ಇದನ್ನು ನೊರೆಕಾಯಿಯೆಂದೂ ಕರೆಯುತ್ತಾರೆ. ತುಳುವಿನಲ್ಲಿದು 'ನರ್ಲ್'. ಸಾಬೂನು ಮಾರುಕಟ್ಟೆಗೆ ಬರುವ ಮೊದಲು ಹಸಿ ಅಂಟವಾಳದ ಕಾಯಿಯನ್ನೇ ಕಲ್ಲಿನ ಮೇಲೆ ಜಜ್ಜಿ ಬಟ್ಟೆ ಬರೆಗಳನ್ನು ಶುಚಿಗೊಳಿಸಲು ಬಳಸುತ್ತಿದ್ದರು. ತಲೆ ಸ್ನಾನಕ್ಕೆ ಇದರ ಒಣಕಾಯಿಗಳನ್ನು ಉಪಯೋಗಿಸುತ್ತಿದ್ದರು. ಇದರಿಂದ ತೊಳೆದ ಕೂದಲು ತುಂಬಾ ನಯವಾಗಿರುತ್ತದೆ.

ರೇಷ್ಮೆ ಸೀರೆ, ಅದರ ಜರಿಗಳು ಮತ್ತು ಬೆಳ್ಳಿ/ಚಿನ್ನಾಭರಣಗಳ ಹೊಳಪು ಹೆಚ್ಚಿಸಲು ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಕೆಲವರು ಇದನ್ನೇ ಬಳಸುತ್ತಾರೆ. ಇದರಲ್ಲಿ ರಾಸಾಯನಿಕಗಳ ಅಡ್ಡ ಪರಿಣಾಮವಿಲ್ಲ. ಇದರ ಹೂವಿನ ಮಕರಂದ ಜೇನುನೊಣಗಳಿಗೆ ಬಲು ಇಷ್ಟ. ಈ ಕಾರಣಕ್ಕೆ ಜೇನುಕೃಷಿಗೆ ಇದು ಹೇಳಿ ಮಾಡಿಸಿದ ಮರ. ಬೀಜಗಳಿಂದ ಈ ಮರದ ಸಸ್ಯೋತ್ಪತ್ತಿ ಸಾಧ್ಯವಾದರೂ ಬೀಜಗಳು ಮೊಳಕೆಯೊಡೆಯುವುದು ಅಪರೂಪ!

—ರಮಣ್ ಶೆಟ್ಟಿ ರೆಂಜಾಳ, ಮುಂಬೈ

